# ಕಿಂಡಿ ಲೋಕವಯ್ಯಾ...!

■ ನಳಿನಿ ಟಿ. ಭೀಮಪ್ಪ
ಕಲೆ: ಸಂತೋಷ್ ಸಸಿಹಿತ್ಲು

ಕಿಂಡಿಲೋಕದ ವ್ಯಾಪ್ತಿ ಬಲುದೊಡ್ಡದು. ಮನೆಗಳನ್ನು ಕಟ್ಟುವ ವೇಳೆ, ಎಲ್ಲೆಲ್ಲಿ ಕಿಂಡಿ ಬಿಡಬೇಕೆಂಬ ಯೋಜನೆಯನ್ನು ಹಾಕುವುದು ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಕಿಟಕಿಗಳ ಸಂಖ್ಯೆ ಕಡಿಮೆಯಿದ್ದ ಮನೆಯ ತಾರಸಿಯಲ್ಲಿ ಬೆಳಕಿನಾಗಮನಕ್ಕೆ 'ಬೆಳಕಿಂಡಿ' ಎಂದು, ಪುಟ್ಟ ಸ್ಥಳವನ್ನು ಖುಲ್ಲಂಖುಲ್ಲಾ ಬಿಡುತ್ತಿದ್ದರು. ಮಳೆ ಬರುವ ಸಮಯದಲ್ಲಿ ಅದನ್ನು ಬಂಡೆಯಿಂದ ಅಥವಾ ಹೆಂಚುಗಳಿಂದ ಮುಚ್ಚಬೇಕಾಗುತ್ತಿತ್ತು. ಕೆಲವೊಮ್ಮೆ ಕಳ್ಳರಿಗೆ ಚೋರಮಾರ್ಗವಾಗಿಯೂ ಬಳಕೆಯಾಗುತ್ತಿತ್ತೆನ್ನಿ. ಹಾಗೆಯೇ ಮನೆಮನೆಗಳಲ್ಲಿ ಕಟ್ಟಿಗೆಯ ಒಲೆಗಳು ಸಾಮಾನ್ಯವಾದ್ದರಿಂದ ಧೂಮ ನಿರ್ಗಮನಕ್ಕೆ ಒಲೆಯ ಮೇಲಿನಿಂದ ಕೊಳವೆಯಾಕಾರದ ಹೊಗೆಗೂಡು ಸ್ಥಾಪನೆಯಾಗಿ, ಅದು ತಾರಸಿಗೆ ಕನೆಕ್ಟ್ ಆಗುತ್ತಿತ್ತು. ಅಲ್ಲೊಂದು ಪುಟ್ಟ ಗೂಡನ್ನು ನಿರ್ಮಿಸಿ, ಅದರ ಸುತ್ತಲೂ ಸಣ್ಣ ಸಣ್ಣ ಕಿಂಡಿಗಳ ಮೂಲಕ ಧೂಮವು ವಾತಾವರಣ ಸೇರುತ್ತಿದ್ದರಿಂದ ಅದನ್ನು 'ಹೊಗೆಗಿಂಡಿ' ಎಂದು ಕರೆಯುತ್ತಿದ್ದರು. ಈಗ ಇಂತಹ ಕಿಂಡಿಗಳು ಅಷ್ಟಾಗಿ ಕಂಡುಬರದಿದ್ದರೂ, ಪರಿಷ್ಕೃತ ಆವೃತ್ತಿಯಂತೆ ಕಂಡುಬರುವ ವೆಂಟಿಲೇಟರ್‌ಗಳು, ಕಿಂಡಿಯೊಳಗೆ ಸ್ಥಾಪಿತಗೊಂಡ ಎಕ್ಸಾಸ್ಟ್ ಫ್ಯಾನುಗಳು, ಕಿಂಡಿಯೊಳಗೆ ತೂರಿಕೊಂಡ ಚಿಮಣಿಗಳನ್ನು ಕಾಣಬಹುದು. 'ಓಪೆನ್ ಟು ಸ್ಕೈ ರೂಫ್' ಎನ್ನುವ 'ಆಕಾಶಕಿಂಡಿ' ಕಾನ್ಸೆಪ್ಟ್ ಹೆಚ್ಚು ಜನಪ್ರಿಯವಾಗುತ್ತಿದೆ. ಬಾಗಿಲಿನ ಹೊರಗೆ ಹಣಕಿ ಹಾಕಲು ಲೆನ್ಸ್‌ನಂತಹ 'ಇಣುಕುಕಿಂಡಿ'ಗಳನ್ನು ಅಳವಡಿಸುವುದು ಸಾಮಾನ್ಯ. ಈಗ ಎಲ್ಲಿ ಬೇಕೋ ಅಲ್ಲಿ ಹಣಕಲು ಸಿಸಿ ಕ್ಯಾಮೆರಾಗಳು ಸಜ್ಜಾಗಿವೆ. ಇತ್ತೀಚಿನ ವರ್ಷಗಳಲ್ಲಿ ಮನೆಯ ಹೊರ ವಿನ್ಯಾಸದಲ್ಲಿಯೂ ಕಿಂಡಿ ವಿನ್ಯಾಸಗಳು ಹೆಚ್ಚು ಜನಪ್ರಿಯವಾಗುತ್ತಿವೆ.

ಕಿಂಡಿ ಎಂದರೆ ಸಾಮಾನ್ಯವಾಗಿ ನೆನಪಿಗೆ ಬರುವುದು ಕನ್ನ ಹಾಕಲು ಕಳ್ಳರು ಕೊರೆಯುವ 'ಕಳ್ಳಗಿಂಡಿ'. ಈ

